ಹೊಸ ದಿಗಂತ
ಸಂಗಮ
ಮಂಗಳೂರು
ಸೋಮವಾರ 28.05.2018

# ನಾಲ್ಕು ದಿನದ ಹಸುಳೆಗೆ ಕೆಎಂಸಿ ವೈದ್ಯರ ತಂಡದಿಂದ ಯಶಸ್ವಿ ಸಂಕೀರ್ಣ ಶಸ್ತ್ರಚಿಕಿತ್ಸೆ

ಮಣಿಪಾಲ: ಇಲ್ಲಿನ ಕಸ್ತೂರ್ಬಾ ಆಸ್ಪತ್ರೆಯಲ್ಲಿ 4 ದಿನದ ಹಸುಳೆಗೆ ತೆರೆದ ಅಪಧಮನಿಯ ಸಂಕೀರ್ಣ ಹೃದಯ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಲಾಗಿದೆ.

ಡಾ. ಅರವಿಂದ ಬಿಷ್ಣೋಯ್ ಮತ್ತವರ ತಂಡ ಈ ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿದ್ದಾರೆ. ಇದೀಗ ಮಗು ಉತ್ತಮವಾಗಿ ಚೇತರಿಸಿಕೊಳ್ಳುತ್ತಿದೆ ಎಂದು ವೈದ್ಯರು ಮಾಹಿತಿ ನೀಡಿದ್ದಾರೆ.

ಈ ಗಂಡು ಮಗು ತಾಯಿಯ 22ನೇ ವಾರದ ಗರ್ಭದಲ್ಲಿದ್ದಾಗಲೇ ಸ್ತ್ರೀರೋಗ ಮತ್ತು ಹೆರಿಗೆ ತಜ್ಞ ಡಾ. ಮುರಳೀಧರ ಪೈ ಅವರು ಅಪಧಮನಿಯ ನ್ಯೂನತೆಯನ್ನು ಪತ್ತೆ ಮಾಡಿದ್ದರು.

ಮೊದಲೇ ತೊಂದರೆಯ ಬಗ್ಗೆ ತಿಳಿದಿದ್ದರಿಂದ ಮಗು ಹುಟ್ಟಿದ 4 ದಿನಗಳವರೆಗೆ ನಿಗಾವಹಿಸಿ ನಂತರ ವೈದ್ಯರು ಶಸ್ತ್ರಕ್ರಿಯೆಗೆ ಸಿದ್ಧರಾಗಿದ್ದರು. ಸತತ 3 ತಾಸುಗಳ ಶಸ್ತ್ರಚಿಕಿತ್ಸೆಯ ನಂತರ ಸಾಮಾನ್ಯ ಅಪಧಮನಿಗಳನ್ನು ಬದಲಿಸುವಲ್ಲಿ ವೈದ್ಯರು ಯಶಸ್ವಿಯಾದರು. ಒಂದು ದಿನ ಮಗುವನ್ನು ಕೃತಕ ಉಸಿರಾಟದಲ್ಲಿ ಇಡಲಾಗಿತ್ತು.



## ಸಾರ್ಥಕದ ಕ್ಷಣವಾಗಿತ್ತು

ಶಸ್ತ್ರಚಿಕಿತ್ಸೆ ನಂತರ ತಮ್ಮ ಮಗುವೂ ಎಲ್ಲಾ ಸಾಮಾನ್ಯರಂತೆ ಬದುಕುತ್ತದೆ ಎಂದು ತಿಳಿಸಿದಾಗ ಪೋಷಕರ ದೃಷ್ಟಿಯಲ್ಲಿ ಬಂದ ಆ ಹೊಳಪನ್ನು ನೋಡುವುದಕ್ಕೆ ಬಹಳ ಸಂತೋಷವಾಯಿತು. ಅದು ಸಾರ್ಥಕದ ಕ್ಷಣವಾಗಿತ್ತು.

■ ಡಾ. ಅರವಿಂದ ಬಿಷ್ಣೋಯ್

- ■ 4 ದಿನದ ಹಸುಳೆಗೆ ತೆರೆದ ಅಪಧಮನಿಯ ಸಂಕೀರ್ಣ ಹೃದಯ ಶಸ್ತ್ರಚಿಕಿತ್ಸೆ
- ■ 22ನೇ ವಾರದ ಗರ್ಭದಲ್ಲಿದ್ದಾಗಲೇ ಅಪಧಮನಿಯ ನ್ಯೂನತೆ ಪತ್ತೆ ಮಾಡಿದ್ದ ಡಾ. ಮುರಳೀಧರ ಪೈ

2ನೇ ದಿನ ಪುಟಾಣಿ ಕಂದ ತನ್ನ ತಾಯಿಯ ಮಡಿಲು ಸೇರಿತು. 9 ದಿನದ ಮಗು ತಾಯಿ ಎದೆಹಾಲು ಕುಡಿಯುವಷ್ಟು ಸಶಕ್ತವಾಯಿತು. 12ನೇ ದಿನ ಮಗುವನ್ನು ಪಾಲಕರು ಮನೆಗೆ ಕರೆದೊಯ್ದರು.

THE NEW INDIAN EXPRESS
MONDAY 28.05.2018

# Open-heart surgery performed on 4-day-old at Kasturba Hospital

EXPRESS NEWS SERVICE @ Udupi

KASTURBA Hospital, Manipal Cardiac Surgeon, Dr Arvind Bishnoi and his team performed an open heart surgery on a four-day old newborn to correct a congenital defect of transposition of great arteries at the hospital here recently. "The child is doing well," Dr Bishnoi said. During a regular check-up during pregnancy, some deformities were detected by Dr Muralidhar V Pai head of Department of OBG. Subsequently on cardiac evaluation, the foetus was diagnosed with transposition of the great arteries.

The Consultants at Kasturba Hospital counseled for surgical treatment immediately on birth. The parents were optimistic and mother delivered her first baby - a male child. The baby was immediately shifted in Neonatal ICU, where Dr Leslie Lewis and his team took care of the baby. They observed that as oxygen in the blood was low, the baby was turning blue. Treatment began immediately and the baby was fit for surgery. The CTVS surgery team decided to go ahead with surgery on the fourth day after birth of the baby.

Dr Arvind Bishnoi and his team in a surgery that lasted three and half hours, corrected the transposition of great arteries. Soon after the surgery, the baby's skin colour turned pink, indicating that the operation was successful. Even the ventilator support was removed after a day. Child started breathing normally. And the baby was ready to be in mother's lap. She breastfed her for the first time on the ninth day and after observation, the parents took him to home on the 12th day.

> It was a rewarding experience to see the smile on the face of the parent's after the child became normal following the successful surgery. The baby can now live a normal life.
>
> Dr Arvind Bishnoi, Cardiac Surgeon

Dr Arvind Bishnoi said, "It was a rewarding experience to see the smile on the face of the parent's after the child became normal following the successful surgery. The baby can now live a normal life."

Dr Avinash Shetty, Medical Superintendent of Kasturba Hospital while congratulating the team said, "Dr Bishnoi is passionate about treating children, especially neonates, with heart diseases. Earlier parents of the sick babies had to risk the travel to Bangalore or metros along with full-fledged medical team and life support equipment's to support the baby. After his joining the Cardiac Surgery Department, the hospital has been providing neonatal cardiac surgical care.



Well-known paediatrician of Manipal Dr Leslie Lewis and his team who is taking care of the baby

ಪ್ರಜಾವಾಣಿ
ಸೋಮವಾರ • ಮೇ 28, 2018

ಮಣಿಪಾಲದ ಕಸ್ತೂರಬಾ ಆಸ್ಪತ್ರೆಯ ವೈದ್ಯರ ಮಹತ್ವದ ಸಾಧನೆ

# 4 ದಿನದ ಶಿಶುವಿಗೆ ತೆರೆದ ಹೃದಯ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಉಡುಪಿ: ಮಣಿಪಾಲದ ಕಸ್ತೂರಬಾ ಆಸ್ಪತ್ರೆಯ ವೈದ್ಯರು ನಾಲ್ಕು ದಿನದ ಮಗುವಿಗೆ ತೆರೆದ ಅಪಧಮನಿ ವರ್ಗಾವಣೆಯ ಹೃದಯ ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದ್ದು, ಈಗ ಶಿಶುವಿನ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ.

ಹೃದಯ ಶಸ್ತ್ರಚಿಕಿತ್ಸಾ ವಿಭಾಗದ ತಜ್ಞ ಡಾ.ಅರವಿಂದ ಬಿಷ್ನೋಯ್ ಮತ್ತು ಅವರ ತಂಡ ಈ ಶಸ್ತ್ರಚಿಕಿತ್ಸೆ ನಡೆಸಿದೆ ಎಂದು ಆಸ್ಪತ್ರೆಯ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಇಲ್ಲಿನ ಸ್ತ್ರೀ ರೋಗ ಮತ್ತು ಹೆರಿಗೆ ವಿಭಾಗದ ಮುಖ್ಯಸ್ಥ ಡಾ.ವಿ ಮುರಳೀಧರ್ ಪೈ ಅವರು ನಿಯಮಿತ ಪರೀಕ್ಷೆಯ ಮೂಲಕ ಮಗು ತಾಯಿಯ ಗರ್ಭದಲ್ಲಿದ್ದಾಗಲೇ ನ್ಯೂನತೆಗಳನ್ನು ಪತ್ತೆ ಮಾಡಿದ್ದರು. ಬಳಿಕ ಹೃದಯದ ಮೌಲ್ಯಮಾಪನದಲ್ಲಿ ಭ್ರೂಣದ ದೊಡ್ಡ ಅಪಧಮನಿಯ ಸಮಸ್ಯೆ ಕಂಡುಹಿಡಿದರು.

ರೋಗವನ್ನು ಮೊದಲೇ ಗುರುತಿಸಿದ್ದರಿಂದ ಮಗುವಿನ ಜನನದ ತಕ್ಷಣ ನವಜಾತ ಶಿಶು ತಜ್ಞ ಡಾ. ಲೆಸ್ಲಿ ಲೂಯಿಸ್ ಹಾಗೂ ತಂಡ ಕಾರ್ಯ ಪ್ರವೃತ್ತವಾಯಿತು. ಮಗುವಿನ ಆರೋಗ್ಯ ಪರೀಕ್ಷೆ

> **ಮುಖ್ಯಾಂಶಗಳು**
> - ಚಿಕಿತ್ಸೆ ಯಶಸ್ವಿ: ಮಗುವಿನ ಆರೋಗ್ಯದಲ್ಲಿ ಚೇತರಿಕೆ
> - ಎಲ್ಲ ಮಕ್ಕಳಂತೆ ಈ ಮಗು ಕೂಡ ಬೆಳೆಯಲಿದೆ: ಡಾ. ಬಿಷ್ನೋಯ್ ಭರವಸೆ
> - ಹೆತ್ತವರ ಕಣ್ಣುಗಳಲ್ಲಿ ಹೊಸ ಬೆಳಕು

ಮಾಡಿದಾಗ ರಕ್ತದಲ್ಲಿ ಆಮ್ಲಜನಕದ ಅಂಶವು ಕಡಿಮೆಯಾಗಿ ಚರ್ಮದ ಬಣ್ಣವು ನೀಲಿ ಬಣ್ಣಕ್ಕೆ ತಿರುಗುವುದು ಕಂಡು ಬಂದಿತ್ತು. ತಕ್ಷಣ ಔಷಧಿಗಳನ್ನು ನೀಡಲಾರಂಭಿಸಿ, ಹೃದಯ ಶಸ್ತ್ರಚಿಕಿತ್ಸಾ ತಜ್ಞರ ತಂಡ ನಾಲ್ಕು ದಿನದ ಕಂದಮ್ಮನಿಗೆ ಶಸ್ತ್ರ ಚಿಕಿತ್ಸೆ ಮಾಡುವ ನಿರ್ಧಾರ ತೆಗೆದುಕೊಂಡಿತು.

ಡಾ. ಅರವಿಂದ ಬಿಷ್ನೋಯ್ ಅರಿವಳಿಕೆ ತಜ್ಞರ ಸಹಾಯದೊಂದಿಗೆ ಸತತ ಮೂರೂವರೆ ಗಂಟೆಗಳ ಕಾಲ ಶಸ್ತ್ರಚಿಕಿತ್ಸೆ ನಡೆಸಿ ಮಗುವಿನ ಸಾಮಾನ್ಯ ಅಪಧಮನಿಗಳನ್ನು ಬದಲಿಸುವಲ್ಲಿ ಯಶಸ್ವಿಯಾದರು.

ಮಗುವಿನ ಚರ್ಮದ ಬಣ್ಣ ಮತ್ತೆ ಗುಲಾಬಿ ಬಣ್ಣಕ್ಕೆ ತಿರುಗಿ, ಶಸ್ತ್ರಚಿಕಿತ್ಸೆ ಯಶಸ್ವಿಯಾಗಿರುವುದನ್ನು ದೃಢಪಡಿಸಿದೆ. 9 ದಿನಕ್ಕೆ ತಾಯಿ ಎದೆ ಹಾಲು ಕುಡಿಸಲು ಆರಂಭಿಸಿದ್ದು, 12ನೇ ದಿನಕ್ಕೆ ಮಗುವನ್ನು ಮನೆಗೆ ಕಳುಹಿಸಲಾಯಿತು ಎಂದು ವೈದ್ಯರು ತಿಳಿಸಿದ್ದಾರೆ.

ಹೃದಯ ಶಸ್ತ್ರಚಿಕಿತ್ಸಾ ವಿಭಾಗದ ತಜ್ಞ ಡಾ.ಅರವಿಂದ ಬಿಷ್ನೋಯ್ ಮಾತನಾಡಿ, ಎಲ್ಲಾ ಮಕ್ಕಳ ಹಾಗೆಯೇ ಈ ಮಗು ಕೂಡ ಬೆಳೆಯಲಿದೆ. ಪೋಷಕರು ಹಾಗೂ ಮಗುವಿನ ಉತ್ತಮವಾದ ಸ್ಪಂದನೆಯಿಂದ ಈ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಲು ಸಾಧ್ಯವಾಗಿದೆ ಎಂದರು.



ಮಣಿಪಾಲದ ಕಸ್ತೂರಬಾ ಆಸ್ಪತ್ರೆಯಲ್ಲಿ 4 ದಿನದ ಮಗುವಿಗೆ ತೆರೆದ ಅಪಧಮನಿ ವರ್ಗಾವಣೆ ಯಶಸ್ವಿ ಹೃದಯ ಶಸ್ತ್ರ ಚಿಕಿತ್ಸೆ ನಡೆಸಿದ ವೈದ್ಯರ ತಂಡ

## 'ಕಸ್ತೂರಬಾ ಆಸ್ಪತ್ರೆಯಲ್ಲೇ ಚಿಕಿತ್ಸೆ'

ಹೃದ್ರೋಗಗಳಿಂದ ಬಳಲುವ ಮಕ್ಕಳನ್ನು ಚಿಕಿತ್ಸೆಗಾಗಿ ಹಿಂದೆ, ಬೆಂಗಳೂರು ಅಥವಾ ಮೆಟ್ರೊ ನಗರಗಳಿಗೆ ಕರೆದೊಯ್ಯಲಾಗುತ್ತಿತ್ತು. ದೊಡ್ಡ ನಗರಗಳಿಗೆ ಚಿಕಿತ್ಸೆಗೆ ಕಳುಹಿಸಲು ವಿಶೇಷವಾಗಿ ತರಬೇತಿ ಪಡೆದ ವೈದ್ಯಕೀಯ ಪಡೆ ಮತ್ತು ಸಹಾಯಕ ಸಿಬ್ಬಂದಿಯೊಂದಿಗೆ ಸುಸಜ್ಜಿತ ಆಂಬುಲೆನ್ಸ್ ಅಗತ್ಯವಿರುತ್ತದೆ. ಕಸ್ತೂರಬಾ ಆಸ್ಪತ್ರೆಯ ಹೃದಯ ಶಸ್ತ್ರಚಿಕಿತ್ಸಾ ವಿಭಾಗಕ್ಕೆ ಡಾ. ಅರವಿಂದ ಬಿಷ್ನೋಯ್ ಅವರ ಸೇರ್ಪಡೆಯಿಂದಾಗಿ, ಚಿಕಿತ್ಸೆ ಅಗತ್ಯವಿರುವ ಶಿಶುಗಳಿಗೆ ಸಕಾಲಿಕ ಮತ್ತು ಮುಂದುವರಿದ ಹೃದಯ ಶಸ್ತ್ರಚಿಕಿತ್ಸೆಯನ್ನು ಆಸ್ಪತ್ರೆಯಲ್ಲೇ ಮಾಡುವುದು ಸಾಧ್ಯವಾಗಿದೆ ಎಂದು ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ ಶೆಟ್ಟಿ ಹೇಳಿದರು.

ಉದಯವಾಣಿ 27-5-2018
UDAYAVANI - MANIPAL

## ಮಣಿಪಾಲ ಆಸ್ಪತ್ರೆ ಸಾಧನೆ

# 4 ದಿನದ ಮಗುವಿಗೆ ತೆರೆದ ಹೃದಯ ಶಸ್ತ್ರಚಿಕಿತ್ಸೆ



ನಾಲ್ಕು ದಿನದ ಮಗುವಿಗೆ ಯಶಸ್ವಿ ಹೃದಯ ಶಸ್ತ್ರಚಿಕಿತ್ಸೆ ನಡೆಸಿದ ತಜ್ಞರ ತಂಡ.

ಉಡುಪಿ, ಮೇ 26: ನಾಲ್ಕು ದಿನದ ಮಗುವಿಗೆ ಮಣಿಪಾಲ ಆಸ್ಪತ್ರೆಯಲ್ಲಿ ಯಶಸ್ವೀ ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

ಹೃದಯ ಶಸ್ತ್ರಚಿಕಿತ್ಸಾ ತಜ್ಞ ಡಾ। ಅರವಿಂದ ಬಿಷ್ಣೋಯ್ ಅವರ ತಂಡ ಶಸ್ತ್ರಚಿಕಿತ್ಸೆ ನಡೆಸಿತು. ಗರ್ಭಾವಸ್ಥೆಯಲ್ಲಿರುವಾಗ ಸ್ತ್ರೀರೋಗ ಮತ್ತು ಹೆರಿಗೆ ವಿಭಾಗ ಮುಖ್ಯಸ್ಥ ಡಾ। ಮುರಳೀಧರ ಪೈ ಅವರು ಕೆಲವು ನ್ಯೂನತೆಗಳನ್ನು ಪತ್ತೆ ಮಾಡಿದ್ದರು. ಬಳಿಕ ಭ್ರೂಣವು ದೊಡ್ಡ ಅಪಧಮನಿಗಳ ವರ್ಗಾವಣೆ ಹೊಂದಿದ ನ್ಯೂನತೆ ತಿಳಿಯಿತು.

ರೋಗ ಪತ್ತೆ ಮೊದಲೇ ತಿಳಿದ ಕಾರಣ ಜನನವಾದ ತಕ್ಷಣ ವೈದ್ಯರು ಕಾರ್ಯಪ್ರವೃತ್ತರಾದರು. ನವಜಾತ ಶಿಶು ತಜ್ಞ ಡಾ। ಲೆಸ್ಲಿ ಲೂಯಿಸ್ ಅವರ ತಂಡ ಪರೀಕ್ಷೆ ಮಾಡಿದಾಗ ರಕ್ತದಲ್ಲಿ ಆಮ್ಲಜನಕ ಕಡಿಮೆಯಾಗಿರುವುದು ಕಂಡುಬಂತು ಮತ್ತು ಚರ್ಮ ನೀಲಿ ಬಣ್ಣಕ್ಕೆ ತಿರುಗುವುದರಲ್ಲಿತ್ತು. ತತ್‌[illegible] ನಾಲ್ಕು ದಿನದ ಪುಟಾಣಿಗೆ ಶಸ್ತ್ರ ಚಿಕಿತ್ಸೆ ಮಾಡಲು ವೈದ್ಯರು ನಿರ್ಧರಿಸಿದರು.

ಡಾ। ಬಿಷ್ಣೋಯ್ ಅವರ ತಂಡ ಸತತ ಮೂರೂವರೆ ಗಂಟೆ ಕಾಲ ಶಸ್ತ್ರಚಿಕಿತ್ಸೆ ನಡೆಸಿ ಸಾಮಾನ್ಯ ಅಪಧಮನಿಗಳನ್ನು ಬದಲಿಸಲು ಯಶಸ್ವಿಯಾಯಿತು. ಅನಂತರ ಚರ್ಮದ ಬಣ್ಣ ಮತ್ತೆ ಗುಲಾಬಿ ಬಣ್ಣಕ್ಕೆ ಮಾರ್ಪಟ್ಟಾಗ ಯಶಸ್ಸನ್ನು ಸೂಚಿಸಿತು. ಒಂದು ದಿನ ಬಳಿಕ ವೆಂಟಿಲೇಟರ್ ತೆಗೆದು ಹಾಕಲಾಯಿತು. ಕಂದ ತಾಯಿ ತೊಡೆಯಲ್ಲಿ ಮಲಗಲು ಸಿದ್ಧವಾಯಿತು. 9ನೆಯ ದಿನ ತಾಯಿ ಎದೆಹಾಲು ಕುಡಿಸಿದರು. 12ನೆಯ ದಿನ ಮಗುವನ್ನು ಮನೆಗೆ ಕರೆದೊಯ್ದರು.

'ಈ ಮಗು ಇತರ ಮಗುವಿನಂತೆ ಸಾಮಾನ್ಯ ಜೀವನ ನಡೆಸಬಹುದು' ಎಂದು ಬಿಷ್ಣೋಯ್ ಹೇಳಿದರು. ಡಾ। ಬಿಷ್ಣೋಯ್ ಸೇರ್ಪಡೆಯಿಂದ ಆಸ್ಪತ್ರೆಯಲ್ಲಿ ಅಗತ್ಯದ ಶಿಶುಗಳಿಗೆ ಸಕಾಲಿಕ ಶಸ್ತ್ರಚಿಕಿತ್ಸೆಯನ್ನು ಒದಗಿಸಲು ಸಾಧ್ಯವಾಗಿದೆ' ಎಂದು ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ। ಅವಿನಾಶ ಶೆಟ್ಟಿ ಅಭಿಪ್ರಾಯಪಟ್ಟಿದ್ದಾರೆ.